(ಇ) ಮೇಲ್ಕಂಡ ಪ್ರಕರಣಗಳಲ್ಲಿ ಕೊಂದ ಪ್ರಾಣಿಗಳನ್ನು ಅರಣ್ಯದಲ್ಲೇ ಬಿಟ್ಟು ಹೋಗಿರುತ್ತಾರೆ. ಆದರೆ ಆನೆಗಳ ದಂತವನ್ನು ಮಾತ್ರ ಅಪಹರಿಸಿರುತ್ತಾರೆ. ಅಲ್ಲದೆ ಈಚಿನ ದಿನಗಳಲ್ಲಿ ಎರಡು ಹೆಣ್ಣಾನೆಗಳು ವಿದ್ಯುತ್ ಸ್ಪರ್ಷದಿಂದ ಅಸು ನೀಗಿರುತ್ತವೆ.

(ಈ) ನಿಜ. ಹಾವಿನ ಚರ್ಮವನ್ನು ಮತ್ತು ಚಿಗರೆ ಕೊಂಬುಗಳನ್ನು ಗಂಪ್ತದಳ ಪೋಲೀಸ್ ಹಾಗೂ ಅರಣ್ಯ ಇಲಾಖೆಯವರು ವಶಪಡಿಸಿಕೊಂಡಿರುತ್ತಾರೆ.

(ಉ) ಇಂಥ ಅಕ್ರಮ ಘಟನೆ ಪುನರಾವರ್ತಿಸದಂತೆ ವಿಶೇಷ ಸಿಬ್ಬಂದಿಯನ್ನು ಆಗಾಗ್ಗೆ ಕಾಡಿನಲ್ಲಿ ಉಸ್ತುವಾರಿಯ ಬಗ್ಗೆ ನೇಮಿಸಲಾಗದೆ. ಈ ಬಗ್ಗೆ ಸಂಬಂಧಪಟ್ಟ ಎಲ್ಲಾ ಅಧೀನ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡಲಾಗಿದೆ.

ರಾಮದುರ್ಗ ತಾಲ್ಲೂಕಿನ ಸಾಲಾಪುರ ಕೆರೆ ಮಂಜೂರಾತಿ ಕುರಿತಾಗಿ

(೬೭) ಶ್ರೀ ಎಸ್. ಎ. ಕೊಪ್ಪದ (ರಾಮದುರ್ಗ).—ಮಾನ್ಯ ಸಣ್ಣ ನೀರಾವರಿ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ರಾಮದುರ್ಗ ತಾಲ್ಲೂಕಿನ ಸಾಲಾಪುರ ಗ್ರಾಮಕ್ಕೆ ಕೆರೆ ಮಂಜೂರು ಆಗಿದೆಯೇ ?

(ಆ) ಆಗಿದ್ದರೆ ಅದರ ಅಂದಾಜು ವೆಚ್ಚ ಎಷ್ಟು ?

(ಇ) ಭೂ ಸ್ವಾಧೀನ ಮಾಡುವ ಕಾರ್ಯ ಯಾವ ಹಂತದಲ್ಲಿದೆ ?

(ಈ) ಕೆರೆ ಪೂರ್ಣಗೊಂಡಾಗ ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರೆಯುತ್ತದೆ ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

(ಅ) ಇಲ್ಲ.

(ಆ) ಮೇಲಿನ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

(ಇ) ಮೇಲಿನ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

(ಈ) ಮೇಲಿನ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

೧ ಪಿ.ಎಂ

ಮಂತ್ರಿಗಳಿಂದ ವಿಚಾರ ಸ್ಪಷ್ಟನೆ

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—ಸ್ವಾಮಿ, ನಿನ್ನೆ ದಿವಸ ಮಾನ್ಯ ವಿರೋಧಪಕ್ಷದ ನಾಯಕರು ಈ ಸದನದಲ್ಲಿ ವಿಜಿಲೆನ್ಸ್ ಕಮೀಷನ್ನಿನವರು ಕೇಳಿದಂಥ ಮಾಹಿತಿಯನ್ನು ಕೊಡುವುದಕ್ಕೆ ಸರ್ಕಾರ ನಿರಾಕರಣೆ ಮಾಡಿದೆ, ಅದರಿಂದ ವಿಜಿಲೆನ್ಸ್ ಕಮೀಷನ್ನಿನ ಕೆಲಸವನ್ನು ಸ್ಥಗಿತಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಅನ್ನುವ ಒಂದು ಆರೋಪಣೆಯನ್ನು ಮಾಡಿದ್ದಾರೆ. ನಾನು ನಿನ್ನೆಯೇ ಈ ಸದನದಲ್ಲಿ ಹೇಳಿದ್ದೇನೆ ಏನೆಂದರೆ ಈ ವಿಷಯ ನನ್ನ ಗಮನಕ್ಕೆ ಬಂದಿಲ್ಲ ಎಂದು ಮಂತ್ರಿ ಇನ್ನೇನು ಹೇಳಿದೆ ಎಂದರೆ ಒಂದು ವೇಳೆ ಈ ವಿಷಯ ನನ್ನ ಕಾರ್ಯಾಲಯಕ್ಕೆ ಬಂದಿದ್ದರೆ ಆ ಬಗ್ಗೆ ವಿಷಯ ತರಿಸಿ ಏನು ವಿಷಯ ಅನ್ನುವುದನ್ನು ಹೇಳುತ್ತೇನೆ ಅಂತ ಹೇಳಿದೆ. ಇದರ ಬಗ್ಗೆ ನಾನು ವಿಚಾರಿಸಿದಾಗ ಅದು ನನ್ನ ಕಾರ್ಯಾಲಯಕ್ಕೆ ಬಂದಿಲ್ಲ ಎಂದು ತಿಳಿದುಬಂತು.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಏನು ವರದಿಯಾಗಿದೆ ಅದು ಸರಿಯಾಗಿ ಬರಬೇಕಾಗುತ್ತದೆ. ಡೆಕನ್ ಹೆರಾಲ್ಡ್‌ನಲ್ಲಿ ಇದರ ಬಗ್ಗೆ ಸರಿಯಾಗಿ ವರದಿಯಾಗಿದೆ ಪ್ರಜಾವಾಣಿ ಪೇಪರ್‌ನಲ್ಲಿ ಸರಿಯಾಗಿ ವರದಿಯಾಗಿಲ್ಲ. It is not proper to make a specific

allegatoin against the Government. We will bring it to the notice of the Government and thean the Government on its own must investigate about this. It is a rleation between the Government and the Vigilance Commission. In fact it was not referred to you at all to start with ಈ ಬಗ್ಗೆ ನಾನು ಯಾವ ಪತ್ರಿಕೆಯನ್ನೂ ಕೂಡ 'ಕೋಟ್' ಮಾಡಲಿಲ್ಲ. ನೀವೆ ಎದ್ದುನಿಂತು ನಾನು ಈಗಲೇ ಯಾವುದನ್ನೂ ಸ್ಪೆಸಿಫಿಕ್ ಆಗಿ ಹೇಳುವುದಿಲ್ಲ, ಅದನ್ನು ವಿಚಾರ ಮಾಡಿ ಹೇಳುತ್ತೇನೆ ಎಂದಿರಿ. ಆವಾಗ ಶ್ರೀ ರಾಂದೇವ್‌ರವರು ಎದ್ದು ನಿಂತು ಆ ಪತ್ರಿಕೆಯನ್ನು ತೋರಿಸಿ ಇದು ಪಿಡಬ್ಲ್ಯೂಡಿಗೆ ಸಂಬಂಧಪಟ್ಟ ಹಾಗೆ ಇರಬಹುದು ಅಂದರು. ಆವಾಗ ನೀವೇ ಇನ್‌ಫಿಯೇಟ್ ತೆಗೆದುಕೊಂಡು ವಿಚಾರ ಮಾಡಿ ಹೇಳುತ್ತೇನೆ ಎಂದಿರಿ. ನನಗೂ ವಿಚಾರ ಗೊತ್ತಿದೆ. ನಾನು ಇದರ ಬಗ್ಗೆ ಡೈರಕ್ಟ್ ಆಪಾದನೆ ಮಾಡುವುದಕ್ಕೆ ಹೋಗಿಲ್ಲ. ನಾನು ಮಂತ್ರಿಯಾಗಿ ಕೆಲಸ ಮಾಡಿರುವುದರಿಂದ ಯಾವ ರೀತಿಯಾಗಿ ಕಾರ್ಯಭಾರ ಮಾಡಬೇಕು ಅನ್ನುವುದು ನನಗೆ ಗೊತ್ತಿದೆ. ರಿಮೈಂಡರ್ಸ್ ಕಳುಹಿಸುವುದರಲ್ಲಿ ಡಿಲೇಯಾಗಿದೆಯೋ ಏನೋ ವಿಚಾರ ಮಾಡಿ ಹೇಳುತ್ತೇನೆಂದು ಹೇಳಿದಿರಿ. ಇದು ಪಿಡಬ್ಲ್ಯೂಡಿ ಡಿಪಾರ್ಟ್‌ಮೆಂಟಿನ ಚೀಫ್ ಇಂಜಿನಿಯರ್ ವಿಚಾರ, ಇದನ್ನು ವಿಚಾರ ಮಾಡಿ ಹೇಳಬೇಕಾಗಿತ್ತದೆ. ಡೈರಕ್ಟ್ ಆಗಿ ಹೇಳುವುದಕ್ಕೆ ಬರುವುದಿಲ್ಲ ಎಂದು ಉತ್ತರ ಕೊಟ್ಟಿರಿ. ಇದರ ಬಗ್ಗೆ ಡೆಕ್ಕನ್ ಹೆರಾಲ್ಡ್‌ನಲ್ಲಿ ಸರಿಯಾಗಿ ವರದಿಯಾಗಿದೆ, ಆದರೆ ಪ್ರಜಾವಾಣಿ ಪತ್ರಿಕೆಯಲ್ಲಿ ಸರಿಯಾಗಿ ವರದಿಯಾಗಿಲ್ಲ. ಈ ವಿಚಾರವನ್ನು ಪ್ರಪ್ರಥಮವಾಗಿ ಆ ಕಡೆಯ ಮಾನ್ಯ ಸದಸ್ಯರೇ ಮೊದಲು ಕೆಣಕಿದರು. ನಾನೇನೂ ಪ್ರಸ್ತಾಪ ಮಾಡಲಿಲ್ಲ. ಈ ಒಂದು ವಿಜಿಲೆನ್ಸ್ ಕಮೀಷನ್ ವಿಚಾರವಾಗಿ ಸರ್ಕಾರ ಅಪಚಾರ ಮಾಡಿದೆ ಎಂದು ಏನಾದರೂ ಹೇಳಿದರೆ ತಪ್ಪಾಗುತ್ತದೆ. ನನಗೂಗೊತ್ತು ಆ ರೀತಿ ಹೇಳಿಲ್ಲ. ದಯವಿಟ್ಟು ತಾವು ತಡ ಮಾಡಬೇಡಿ ಅವರಿಗೆ ಬೇಕಾದಂಥಾ ಸಹಕಾರ ಕೊಡಬೇಕು ಎಂದು ನಾನು ಪ್ರಸ್ತಾಪ ಮಾಡಿದನೇ ವಿನಹ ಬೇರೆ ಯಾವ ವಿಚಾರವನ್ನೂ ಪ್ರಸ್ತಾಪ ಮಾಡಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಅಧ್ಯಕ್ಷರೇ, ಈ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಈಗ ಲೋಕಪಾಲ ಮತ್ತು ಲೋಕ ಆಯುಕ್ತ ಮಸೂದೆಯೊಂದನ್ನು ಇಲ್ಲಿ ಮಂಡನೆ ಮಾಡಿರತಕ್ಕಂಥಾದ್ದು ತಮಗೆ ಗೊತ್ತಿದೆ. ವಿಜಿಲೆನ್ಸ್ ಕಮೀಷನ್ನಿನ ಕೆಲಸ ಸ್ಥಗಿತವಾಗುತ್ತದೆ ಎನ್ನತಕ್ಕಂಥಾ ಒಂದು ಹಿನ್ನೆಲೆಯಲ್ಲಿ ಒಂದು ಮಾತು ಹೇಳುತ್ತೇನೆ. ನಮ್ಮ ಸರ್ಕಾರದಲ್ಲಿ ಯಾವುದೇ ಅಧಿಕಾರಿಗಿರಾಗಲಿ, ಈ ಭ್ರಷ್ಟಾಚಾರದ ಬಗ್ಗೆ ರಕ್ಷಣೆ ಕೊಡುವುದಿಲ್ಲ ಎನ್ನುವ ಮಾತನ್ನು ಮೊದಲೇ ಸ್ಪಷ್ಟಪಡಿಸಿದ್ದೇವೆ. ಆದರೆ ಅವರನ್ನು ಸಸ್ಪೆನ್‌ಷನ್‌ನಲ್ಲಿ ಇಡುವ ಕಾಲದಲ್ಲಿ ಒಂದು ನಿರ್ದಿಷ್ಟವಾದ ನೀತಿಯನ್ನಿ ಅನುಸರಿಸಬೇಕಾಗುತ್ತದೆ. ಸಿಕ್ಕಾಪಟ್ಟೆಯಾಗಿ ಇರಬಾರದು ಎನ್ನುವುದು ನಮ್ಮ ಉದ್ದೇಶ. ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ ತಾ. ೧೮-೨-೧೯೭೩ ರಲ್ಲಿ ವಿಜಿಲೆನ್ಸ್ ಕಮೀಷನ್ನಿನಿಂದ ಡಿಪಿಎಆರ್ ಒಂದು ಕಾಗದ ಬಂದಿದೆ ನನ್ನ ಇಲಾಖೆಗೆ ಬಂದಿಲ್ಲ. ಅಲ್ಲಿಗೆ ಚೀಫ್ ಇಂಜಿನೀಯರ್ಸ್ ಅವರ ಪ್ರಾಪರ್ಟಿ ಸೇಟ್‌ಮೆಂಟ್ಸ್ ಕಳುಹಿಸಿ ಕೊಡಿ ಎಂದು ಬಂದಿದೆ. ಅದಕ್ಕೆ ಚೀಫ್ ಸೆಕ್ರೆಟರಿಯವರು ಉತ್ತರ ಬರೆದಿದ್ದಾರೆ ಏನೆಂದರೆ ರಾಜ್ಯದಲ್ಲಿ ೩೦ ಜನ ಚೀಫ್ ಇಂಜಿನೀಯರ್ಸ್ ಇದ್ದಾರೆ. ಎಲ್ಲರದ್ದೂ ಪ್ರಾಪರ್ಟಿ ಸ್ಟೇಟ್‌ಮೆಂಟ್ಸ್ ಕಳಹಿಸಬೇಕು ಎಂದರೆ ಆಗುವುದಿಲ್ಲ, ಯಾವುದಾದರೂ ಸ್ಪೆಸಿಫಿಕ್ ಆಗಿದ್ದರೆ, ಯಾವುದಾದರೂ ಇಂಡಿವಿಜುಯಲ್ ಕೇಸ್‌ನದ್ದು ಆಗಿದ್ದರೆ ಅಂಥಾದ್ದನ್ನು ತಿಳಿಸಿದರೆ ಕಳುಹಿಸಿಕೊಡುತ್ತೇವೆಂದು ಹೇಳಿದ್ದಾರೆ. ಆದುದರಿಂದ ಇವರಲ್ಲಿ ಯಾವ ಅಧಿಕಾರಿ ಬಗ್ಗೆಯೂ ಸರ್ಕಾರ ಷೀಲ್ಡ್ ಮಾಡಬೇಕಾದಂಥಾ ಅವಶ್ಯಕತೆ ಇಲ್ಲ. ನಾವು ಯಾರ ಬಗ್ಗೆಯೂ ಕಾಳಜಿ ವಹಿಸಬೇಕಾದಂಥಾ ಅವಶ್ಯಕತೆಯೇ ಇಲ್ಲ. ಈ ಪತ್ರ ವಿಜಿಲೆನ್ಸ್ ಕಮೀಷನಿಂದ ಡಿಪಿಎಆರ್‌ಗೆ ಬಂದಿದೆ. ಇದು ವಾಸ್ತವಿಕವಾದ ಅಂಶ.